International Journal of Kannada Research 2022; 8(4): 109-114

International Journal of Kannada Research
www.kannadajournal.com

ISSN: 2454–5813
IJKR 2022; 8(4): 109-114
© 2022 IJKR
www.kannadajournal.com
Received: 01-09-2022
Accepted: 05-10-2022

**ಡಾ.ಕೆ.ಶಿವಾನಂದಯ್ಯ**
ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ವಿಭಾಗ ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ-577501
ಕರ್ನಾಟಕ, ಭಾರತ

Corresponding Author:
**ಡಾ.ಕೆ.ಶಿವಾನಂದಯ್ಯ**
ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ವಿಭಾಗ ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ-577501
ಕರ್ನಾಟಕ, ಭಾರತ

# ಹೊಸದುರ್ಗ ತಾಲೂಕಿನ ಸ್ಥಳನಾಮಗಳ ವರ್ಗೀಕರಣ

**ಡಾ.ಕೆ.ಶಿವಾನಂದಯ್ಯ**

## ಪೀಠಿಕೆ

ಸ್ಥಳನಾಮ ಅಧ್ಯಯನದಲ್ಲಿ ವರ್ಗೀಕರಣ ಪ್ರಮುಖವಾದುದು. ಅಪಾರ ಸಂಖ್ಯೆಯಲ್ಲಿರುವ ಸ್ಥಳನಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲು ಇದು ಸಹಾಯವಾಗುತ್ತದೆ. ಮತ್ತು ಸ್ಥಳನಾಮಗಳ ಐತಿಹಾಸಿಕ, ಭಾಷಿಕ, ಸಾಂಸ್ಕೃತಿಕ ಮುಂತಾದ ಮಹತ್ವದ ಸಂಗತಿಗಳನ್ನು ಗುರುತಿಸಲು ನೆರವಾಗುತ್ತದೆ. ಅಸಂಖ್ಯ ಸ್ಥಳನಾಮಗಳನ್ನು ಕೆಲವು ಸಾಮಾನ್ಯ ತತ್ವಗಳಿಗನುಗುಣವಾಗಿ ವರ್ಗೀಕರಿಸಿ ಅಧ್ಯಯನಕ್ಕೆ ಒಳಪಡಿಸುವುದು ಅಗತ್ಯ ಹಾಗೂ ಅನಿವಾರ್ಯವೂ ಹೌದು. ಈ ನಿಟ್ಟಿನಲ್ಲಿ ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರು ವಿವಿಧ ತತ್ವಗಳನ್ನು ಆಧರಿಸಿ ಸ್ಥಳನಾಮಗಳನ್ನು ವರ್ಗೀಕರಿಸಲು ಪ್ರಯತ್ನಿಸಿದ್ದಾರೆ. ಯಾವುದೇ ಒಂದು ವರ್ಗೀಕರಣವು ಎಲ್ಲ ಪ್ರದೇಶಗಳ ಸ್ಥಳನಾಮ ಅಧ್ಯಯನಕ್ಕೆ ನೆರವಾಗುತ್ತದೆಂದು ಭಾವಿಸಬಾರದು. ವಿವಿಧ ವಿದ್ವಾಂಸರ ವರ್ಗೀಕರಣಗಳ ಸ್ಥೂಲ ಪರಿಶೀಲನೆಯು ಆಯಾಯ ಪ್ರದೇಶದ ಸ್ಥಳನಾಮಗಳ ಅಧ್ಯಯನಕ್ಕೆ ಅಗತ್ಯವಾದ ವರ್ಗೀಕರಣವನ್ನು ರೂಪಿಸಿಕೊಳ್ಳಲು ನೆರವಾಗುತ್ತದೆ. ಇದನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಪ್ರಬಂಧದಲ್ಲಿ ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಮಾಡಿರುವ ಸ್ಥಳನಾಮಗಳ ವರ್ಗೀಕರಣವನ್ನು ಸ್ಥೂಲ ಅವಲೋಕನದ ಮೂಲಕ ಹೊಸದುರ್ಗ ತಾಲೂಕಿನ ಸ್ಥಳನಾಮ ಅಧ್ಯಯನಕ್ಕೆ ಬೇಕಾಗಿರುವ ವರ್ಗೀಕರಣವನ್ನು ರೂಪಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಇಂಗ್ಲಿಶ್ ಸ್ಥಳನಾಮ ನಿಘಂಟು Introduction to the Oxford Dictionary of English Place names ಕೃತಿಯ ಕರ್ತೃ ಎಕ್ವಾಲ್ ಅವರು ಸ್ಥಳನಾಮಗಳನ್ನು ನಾಲ್ಕು ರೀತಿಯಲ್ಲಿ ವರ್ಗೀಕರಣ ಮಾಡಿದ್ದಾರೆ.

1. Folk names or tribal names
2. Habitation names proper
3. Place names which denote a defined are of ground, a piece of flat land in a riverbed, an enclosure or an open place in a wood
4. Original natural names i.e, names denoting Rivers, Streams, Ponds, Fords, Lakes etc [1]

ಸ್ಥಳನಾಮ ವರ್ಗೀಕರಣದಲ್ಲಿ ಎಕ್ವಾಲ್ ಅವರದ್ದು ಮೊದಲ ಪ್ರಯತ್ನವಾಗಿರುವುದರಿಂದ ಗಮನಾರ್ಹ ಎನಿಸುತ್ತದೆ. ಆದರೆ ವಿವಿಧ ನೆಲೆಗಳಲ್ಲಿ ರೂಪಿತವಾದ ಸ್ಥಳನಾಮಗಳನ್ನು ನಾಲ್ಕು ಬಗೆಯಲ್ಲಿರಿಸಿ ಅಧ್ಯಯನ ಮಾಡಲು ಸಾಧ್ಯವಾಗುವುದಿಲ್ಲ.

ಲ್ಯಾಂಬರ್ಟ್ ಮತ್ತು ಮೇರಿಯೋಪೈ ಎಂಬ ವಿದ್ವಾಂಸರು ಸ್ಥಳನಾಮ ವರ್ಗೀಕರಣಕ್ಕೆ ನೆರವಾಗುವ ಹನ್ನೆರಡು ತತ್ವಗಳನ್ನು ಪ್ರಸ್ತಾಪಿಸಿದ್ದಾರೆ.[2]

1. ಚಾರಿತ್ರಿಕ ನಾಮಗಳು,

2. ಮತೀಯ ನಾಮಗಳು
3. ಪ್ರಾಣಿ ನಾಮಗಳು
4. ವ್ಯಕ್ತಿ ನಾಮಗಳು
5. ಜನಾಂಗ ನಾಮಗಳು
6. ಪುರಾತನ ನಾಮಗಳ ಪುನರಾವರ್ತನೆ
7. ಸಸ್ಯ ಹಾಗೂ ಲೋಹನಾಮಗಳ ಪ್ರತಿಕರಣ
8. ಭಾವನಾಮಗಳು ಆಧಾರವಾಗುಳ್ಳ ಹೆಸರು
9. ಸಾಹಿತ್ಯ ಅಥವಾ ಕಲ್ಪನೆಯಿಂದ ಸ್ವೀಕರಿಸಿದ ಹೆಸರು
10. ಸುಖದುಃಖ ಸೂಚಕ ನಾಮಗಳು
11. ಪ್ರಮಾದ ಲಬ್ದನಾಮಗಳು
12. ಹಾಸ್ಯ ನಾಮಗಳು

ಈ ವಿದ್ವಾಂಸರು ಸ್ಥಳನಾಮ ವರ್ಗೀಕರಣ ಕುರಿತು ನೀಡಿರುವ ತತ್ವಗಳಲ್ಲೇ ಸಾಕಷ್ಟು ಪುನರಾವರ್ತನೆ ಇರುವುದರಿಂದ ಅಧ್ಯಯನಕ್ಕೆ ಅಷ್ಟೊಂದು ಪ್ರಯೋಜನವಾಗಲಾರದು.
ಭಾರತೀಯ ಭಾಷಾವಿಜ್ಞಾನಿಗಳಲ್ಲಿ ಪ್ರಮುಖರಾದ ಸುನೀತಕುಮಾರ ಚಟರ್ಜಿ ಅವರು ಸ್ಥಳನಾಮಗಳನ್ನು ಐದು ರೀತಿಯಲ್ಲಿ ವರ್ಗೀಕರಿಸಿದ್ದಾರೆ. ಅವೆಂದರೆ;
1. ಜಾತಿ ಅಥವಾ ಬುಡಕಟ್ಟಿನಿಂದ ಬಂದ ಹೆಸರುಗಳು
2. ಪ್ರಾಕೃತಿಕ ಲಕ್ಷಣಗಳಿಂದ ಬಂದ ಹೆಸರುಗಳು
3. ಧಾರ್ಮಿಕ ಸಂಗತಿಯನ್ನಾಧರಿಸಿದ ಹೆಸರುಗಳು
4. ವ್ಯಕ್ತಿವಾಚಕ ಅಥವಾ ಘಟನೆಯನ್ನಾಧರಿಸಿದ ಹೆಸರುಗಳು
5. ಪ್ರಾಚೀನ ಹೆಸರುಗಳ ಪುನರಾವರ್ತನೆಯಿಂದ ರೂಪುಗೊಂಡ ಹೆಸರುಗಳು

ಸ್ಥಳನಾಮ ಅಧ್ಯಯನಗಳನ್ನು ಗಂಭೀರವಾಗಿ ಕೈಗೊಂಡ ಮತ್ತೊರ್ವ ಪುರಾತತ್ವಜ್ಞ ಎಚ್.ಡಿ.ಸಂಕಾಲಿಯಾ ಸ್ಥಳನಾಮಗಳನ್ನು ಏಳು ರೀತಿಯಲ್ಲಿ ವರ್ಗೀಕರಿಸಿದ್ದಾರೆ. ಅವೆಂದರೆ;
1. ವ್ಯಕ್ತಿವಾಚಕ
2. ಘಟನಾಧಾರಿತ
3. ಮೌಢ್ಯ ಹಾಗೂ ಸಂಪ್ರದಾಯಗಳನ್ನಾಧರಿಸಿದ್ದು
4. ಭೌಗೋಳಿಕ ವೈಲಕ್ಷಣಗಳನ್ನಾಧರಿಸಿದ್ದು
5. ಮರ, ಫಸಲು, ಹೂ, ಹಣ್ಣುಗಳಿಂದ ಬಂದವುಗಳು
6. ಪ್ರಾಣಿ, ಪಕ್ಷಿ ಹೆಸರುಗಳಿಂದ ಬಂದವುಗಳು
7. ಪ್ರಾಚೀನ ಹೆಸರುಗಳ ಪುನರಾವರ್ತನೆ

ಎಚ್.ಡಿ.ಸಂಕಾಲಿಯಾ ಅವರು ಸುನೀತಕುರಮಾರ ಚಟರ್ಜಿ ಅವರ ವರ್ಗೀಕರಣವನ್ನು ಅರ್ಥಪೂರ್ಣವಾಗಿ ವಿಸ್ತರಿಸಿದ್ದಾರೆ ಎಂದು ಹೇಳಬಹುದು.
ಕನ್ನಡ ವಿದ್ವಾಂಸರ ಸ್ಥಳನಾಮ ವರ್ಗೀಕರಣ ಪರಿಶೀಲನೆಯಲ್ಲಿ ಮೊದಲಿಗೆ ಹಿರಿಯ ವಿದ್ವಾಂಸರಾದ ಶಂ.ಬಾ.ಜೋಶಿ ಅವರು ತಮ್ಮ ಎಡೆಗಳು ಹೇಳುವ ಕಂನಾಡ ಕತೆ (1947) ಕೃತಿಯಲ್ಲಿ ಸ್ಥಳನಾಮಗಳನ್ನು ಇಪ್ಪತ್ತೆರಡು ಗುಂಪುಗಳಾಗಿ ವರ್ಗೀಕರಿಸಿದ್ದಾರೆ. ಅವೆಂದರೆ;
1. ಪ್ರಾಣಿಗಳಿಂದ ಬಂದುವು
2. ಗಿಡಗಂಟಿಗಳಿಂದ ಬಂದ ಹೆಸರುಗಳು
3. ದೇಹದ ಅಂಗಾಂಗಗಳಿಂದ ಬಂದ ಹೆಸರು
4. ಬಳಗದವರಿಂದ ಬಂದ ಹೆಸರುಗಳು
5. ಮನೆಗಳಿಂದ
6. ದಿನಸುಗಳ ಹೆಸರುಗಳಿಂದ
7. ಬಣ್ಣಗಳಿಂದ
8. ಹರಳುಗಳಿಂದ
9. ಬಂಗಾರದಿಂದ
10. ಅಂಕೆಗಳಿಂದ
11. ಗೃಹಾದಿಗಳಿಂದ
12. ಮಳೆ, ಮಿಂಚು ಮುಂತಾದವುಗಳಿಂದ
13. ದಿಕ್ಕುಗಳಿಂದ
14. ನೆಲದಿಂದ
15. ಬೇಸಾಯದಿಂದ
16. ಕಾಲದಿಂದ
17. ಚಿಕ್ಕ, ಹಿರೆ, ಸಣ್ಣ, ದೊಡ್ಡ
18. ಕೂಡಿಕೆಯಿಂದ
19. ದೇವತಾದಿಗಳಿಂದ ಬಂದುವು (ರಾಮಾಯಣ, ಮಹಾಭಾರತದಿಂದ, ಪುರಾಣದಿಂದ)
20. ಜನಾಂಗಗಳಿಂದ ಬಂದ ಹೆಸರುಗಳು (ಪುರಾತನ, ಐತಿಹಾಸಿಕ, ಅರ್ವಾಚೀನ) 21)ವ್ಯವಸಾಯ, ಉದ್ಯೋಗ, ಅಧಿಕಾರಿಗಳಿಂದ 22)ವ್ಯಕ್ತಿಗಳಿಂದ ಬಂದುವು (ಪುರಾತನ ಋಷಿಮುನಿಗಳಿಂದ, ರಾಜಕೀಯ ಮತ್ತು ಸಾಮಾಜಿಕ, ಧಾರ್ಮಿಕ)

ಈ ವರ್ಗೀಕರಣವು ಅತಿವ್ಯಾಪ್ತಿ ದೋಷದಿಂದ ಮುಕ್ತವಾಗಿದೆ. ಇಪ್ಪತ್ತೆರಡು ವಿವಿಧ ಗುಂಪುಗಳಾಗಿ ವರ್ಗೀಕರಿಸಿರುವ ಈ ವಿಧಾನ ತುಸು ದೊಡ್ಡದೆನಿಸುತ್ತದೆ. ಆದರೆ ಪುನರಾವೃತ್ತಿ ಇಲ್ಲದೆ ಇರುವುದರಿಂದ ಸ್ಥಳನಾಮ ಅಧ್ಯಯನ ಕುರಿತಂತೆ ವೈಜ್ಞಾನಿಕ ತಳಹದಿಯ ಮೇಲೆ ಸಾಗಲು ನೆರವಾಗುತ್ತದೆಂದು ಹೇಳಬಹುದು.
ಪ್ರೊ.ದೇ.ಜವರೇಗೌಡರು ತಮ್ಮ ಸ್ಥಳನಾಮ ವ್ಯಾಸಂಗ (1990) ಕೃತಿಯಲ್ಲಿ ಸ್ಥಳನಾಮಗಳನ್ನು ಹತ್ತು ವಿಧಗಳಲ್ಲಿ ವರ್ಗೀಕರಿಸಿದ್ದಾರೆ.[3]
1. ವಸತಿಗಳನ್ನು ಸೂಚಿಸುವ ಘಟಕಗಳು: ಹಳ್ಳಿ, ಊರ್, ಪುರ, ವಾಡಿ, ಪಾಡಿ, ಬೀಡು, ದೊಡ್ಡಿ, ಹಟ್ಟಿ, ಹುಂಡಿ, ಗೂಡು, ಬೀದಿ, ಹಾದಿ
2. ತಿಟ್ಟು, ಬೆಟ್ಟ, ಕಾಡು, ಕಲ್ಲುಗಳನ್ನು ಸೂಚಿಸುವ ಘಟಕಗಳು: ಕುಪ್ಪೆ, ಕೊಪ್ಪಲು, ಕುಂದ, ಬೆಟ್ಟ, ಮಲೆ, ಗಟ್ಟ, ಘಟ್ಟ, ಕೋಡು, ಕಲ್, ಕಲ್ಲು, ಗುಂಡ್ಲು, ಕಾಡು, ಕುಮರಿ, ತಿಟ್ಟು
3. ಜಲಸೂಚಕ ಘಟಕಗಳು: ಕೆರೆ, ಕಟ್ಟೆ, ಕೊಳ, ಸಮುದ್ರ, ಅಂಬುದಿ, ಗುಂಡಿ, ತೊರೆ, ಕೂಡ್ಲು, ಕೋಡಿ, ಮೋಳೆ
4. ಮಣ್ಣಿನ ಬಗೆ, ಸನ್ನಿವೇಶವೇ ಮೊದಲಾದ ಭೌಗೋಲಿಕ ಲಕ್ಷಣಗಳನ್ನು ಸೂಚಿಸುವ ಘಟಕಗಳು: ಹಂತ, ಕಾವಲ್, ಬಾಳು, ವಾಳು, ಹಾಳು, ಆಳು, ಮಾಳ, ಸಾಲ್, ಮೂಲೆ
5. ಜಾತಿ, ಕುಲ, ಧರ್ಮ ಸೂಚಕ ಘಟಕಗಳು: ಮಂಗಳ, ಅಗ್ರಹಾರ, ಗುಡಿ, ಚತ್ರ
6. ವ್ಯಾಪಾರ ಕೇಂದ್ರಗಳನ್ನು ಸೂಚಿಸುವ ಘಟಕಗಳು: ಪಟ್ಟಣ, ಪಟ್ನ, ನಗರ, ಪೇಟೆ, ಸಂತೆ

7. ಸೈನಿಕ ಕೇಂದ್ರಗಳನ್ನೂ ಕೋಟೆಗಳನ್ನೂ ನಿರ್ದೇಶಿಸುವ ಘಟಕಗಳು: ಪಾಳ್ಯ, ಪಾಳೆಯ, ಕೋಟೆ
8. ಸಸ್ಯ ಜಾತಿಯನ್ನು ನಿರ್ದೇಶಿಸುವ ಘಟಕಗಳು: ಆಲ, ಉಗನಿ, ಮತ್ತಿ, ನೇರ್ಲೆ, ಮಾವು, ಜಾಲ, ಜಾಜಿ, ವಲ್ಲಿ, ನೆಲ್ಲಿ
9. ಪ್ರಾಣಿ ವಾಚಕ ಘಟಕಗಳು: ಸೋಗೆ, ನಂದಿ
10. ಸಂಕೀರ್ಣ ಘಟಕಗಳು: ತಲೆ, ಬಾಗಿಲು, ಗುಂಬ, ಗುಂಬೆ, ಗಾಣ, ಕುಣಿಕೆ, ಸೊಡ್ಲು, ಏಣಿ

ಪ್ರೊ.ದೇ.ಜ.ಗೌ ಅವರು ವಾರ್ಗಿಕವನ್ನಾಧರಿಸಿ ವರ್ಗೀಕರಣ ಮಾಡಿದ್ದಾರೆ. ಇದು ಮೈಸೂರು ಜಿಲ್ಲೆಯನ್ನು ಮುಖ್ಯವಾಗಿರಿಸಿಕೊಂಡಿದೆ. ಮತ್ತು ಇಡೀ ಕರ್ನಾಟಕದ ವಾರ್ಗಿಕಗಳನ್ನು ಗಮನಿಸಿದಾಗ ಪೂರ್ಣವಾಗುತ್ತದೆ ಎಂದು ಸ್ವತಃ ದೇಜಗೌ ಅವರೇ ಹೇಳಿರುವುದರಿಂದ ಎಲ್ಲ ಪ್ರದೇಶಗಳ ಅಧ್ಯಯನಕ್ಕೆ ಸೂಕ್ತವಾಗದು. ಆದರೆ ಸ್ಥಳನಾಮ ವರ್ಗೀಕರಣಕ್ಕೆ ನೆರವಾಗುತ್ತದೆ ಎಂದು ಹೇಳಬಹುದು. ಪ್ರೊ.ದೇಜಗೌ ಅವರ ವರ್ಗೀಕರಣದ ಕ್ರಮವನ್ನು ಆಧರಿಸಿ ಡಾ.ವಿಶ್ವನಾಥ ಅವರು ತಮ್ಮ ಸ್ಥಳನಾಮಗಳು (1996) ಕೃತಿಯಲ್ಲಿ ಹದಿಮೂರು ಬಗೆಯ ವರ್ಗೀಕರಣವನ್ನು ಸೂಚಿಸಿದ್ದಾರೆ.[4]

1. ವಾಸ್ತವ್ಯ ಸೂಚಕ ಘಟಕಗಳು
2. ಭೂಸೂಚಕ ಘಟಕಗಳು
3. ಜಲಸೂಚಕ ಘಟಕಗಳು
4. ಶಿಲಾ ಘಟಕಗಳು
5. ಸಸ್ಯವಾಚಕ ಘಟಕಗಳು
6. ವ್ಯಾಪಾರ ಕೇಂದ್ರಗಳನ್ನು ನಿರ್ದೇಶಿಸುವ ಘಟಕಗಳು
7. ವ್ಯಕ್ತಿನಾಮಗಳು
8. ದೇವತೆಗಳ ಹೆಸರುಗಳಿಂದ ಕಂಡು ಬರುವ ಸ್ಥಳನಾಮ ಘಟಕಗಳು
9. ವೃತ್ತಿನಾಮ ಘಟಕಗಳು
10. ಪ್ರಾಣಿಗಳಿಂದ ವ್ಯಕ್ತವಾಗುವ ಸ್ಥಳನಾಮ ಘಟಕಗಳು
11. ದಿಕ್ಕುಗಳಿಂದ ಸೂಚಿತವಾಗುವ ಸ್ಥಳನಾಮ ಘಟಕಗಳು
12. ಗ್ರಹನಕ್ಷತ್ರಾದಿಗಳಿಂದ ಬಂದ ಹೆಸರುಗಳು
13. ಮನೆತನದ ಹೆಸರುಗಳಿಂದ

ಡಾ.ವಿಶ್ವನಾಥ ಅವರು ಸೀಮಿತ ಹಾಗೂ ವಿಶಾಲಾರ್ಥದಲ್ಲಿ ವರ್ಗೀಕರಣ ಮಾಡಿರುತ್ತಾರೆ. ಪ್ರತಿಯೊಂದು ಪ್ರದೇಶದ ಸಾಂಸ್ಕೃತಿಕ ಹಿನ್ನೆಲೆಗಳು ಬೇರೆ ಬೇರೆ ಆಗಿರುವುದರಿಂದ ಯಾವುದೇ ಒಂದು ವರ್ಗೀಕರಣವನ್ನು ಇಡಿಯಾಗಿ ಸ್ವೀಕರಿಸಲು ಬರುವುದಿಲ್ಲ. ರಘುಪತಿ ಭಟ್ ಕೆಮ್ತೂರ್ ಅವರು ತಮ್ಮ ತುಳುನಾಡಿನ ಸ್ಥಳನಾಮಗಳು ಎಂಬ ಕೃತಿಯಲ್ಲಿ ಎರಡು ಪ್ರಧಾನ ಗುಂಪುಗಳಾಗಿ ವಿಂಗಡಿಸಿ ಅದರಲ್ಲಿ ಇಪ್ಪತ್ತೆಂಟು ಒಳವಿಭಾಗಗಳನ್ನು ಗುರುತಿಸಿದ್ದಾರೆ.

ಅ)ಪ್ರಾಕೃತಿಕ ಹೆಸರುಗಳು

1. ಜಲವಾಚಕಗಳು
2. ಜಲಸಂಬಂಧಿವಾಚಕಗಳು
3. ಉನ್ನತ ಭೂವಾಚಕಗಳು
4. ನಿಮ್ನ ಭೂವಾಚಕಗಳು
5. ಶಿಲಾ ವಾಚಕಗಳು
6. ಕ್ಷೇತ್ರ ವಾಚಕಗಳು (ಗದ್ದೆ, ಹೊಲ ಮತ್ತು ಭೂಭಾಗಗಳೂ ಸೇರಿದಂತೆ)
7. ಬೆಳೆ-ತರಕಾರಿಗಳ ಹೆಸರುಗಳು
8. ಅರಣ್ಯ, ಬನ, ಪೊದೆ
9. ಸಸ್ಯವರ್ಗ
10. ಪ್ರಾಣಿ-ಪಕ್ಷಿ ವರ್ಗ
11. ದಿಕ್ಕುದೆಸೆಗಳು (ಸ್ಥಳದ ಸನ್ನಿವೇಶ, ಮೇಲೆ-ಕೆಳಗು, ಎಡ-ಬಲ ಸೇರಿದಂತೆ)
12. ವಿಲಕ್ಷಣ ಭೂ ಸ್ಥಿತಿಯಿಂದ ನಿಷ್ಪನ್ನವಾದ ಹೆಸರುಗಳು
13. ಮಾರ್ಗ ಸೂಚಕಗಳು
14. ಸಾಪೇಕ್ಷ ಸ್ಥಳನಾಮಗಳು (ಕಾಲ ಸಂಬಂಧಿ, ಗಾತ್ರ ಸಂಬಂಧಿ, ಎತ್ತರ-ತಗ್ಗು, ಸಂಖ್ಯಾ ಸಂಬಂಧಿ)
15. ಮಣ್ಣು (ಗುಣ, ಬಣ್ಣ, ತೇವಾಂಶ ಸೇರಿದಂತೆ)
16. ಭೌತ ವಸ್ತು (ಗಾಳಿ, ಬೆಳಕು, ಸೂರ್ಯ, ಚಂದ್ರ, ಆಕಾಶ ಕುರಿತಂತೆ)
17. ಬಣ್ಣ ಆ) ಸಾಂಸ್ಕೃತಿಕ ಹೆಸರುಗಳು
18. ವ್ಯಕ್ತಿನಾಮಗಳು (ಅಂಕಿತನಾಮ, ಗಂಡು ಹೆಣ್ಣು ಸೇರಿದಂತೆ)
19. ಕುಲನಾಮ (ಜಾತಿವಾಚಕ, ವ್ಯಕ್ತಿವಾಚಕ)
20. ಸಂಬಂಧವಾಚಕ
21. ಜನಾಂಗವಾಚಕ
22. ದೈವವಾಚಕ
23. ಪೂಜೆ, ಪೂಜಾವಿಧಿ, ಪೂಜಾಪರಿಕರ ಇತ್ಯಾದಿ
24. ವಾಸ್ತವ್ಯ ಸೂಚಕ
25. ವಸ್ತುವಾಚಕ
26. ವ್ಯಾಪಾರ, ಉದ್ದಿಮೆ ಇತ್ಯಾದಿ
27. ಹವ್ಯಾಸ-ಕಲೆ ಮನರಂಜನೆ
28. ಚಾರಿತ್ರಿಕ ಹೆಸರುಗಳು (ಮನೆತನ, ಪದವಿ, ಆಡಳಿತ, ಕಂದಾಯ)

ಡಾ,ರಘುಪತಿ ಭಟ್ ಕೆಮ್ತೂರ್ ಅವರು ತುಳುನಾಡಿನ ಸ್ಥಳನಾಮಗಳನ್ನು ಆಧರಿಸಿ ವರ್ಗೀಕರಿಸಿದ್ದರೂ, ಕರ್ನಾಟಕದ ಇತರ ಪ್ರದೇಶದ ಸ್ಥಳನಾಮಗಳನ್ನು ವರ್ಗೀಕರಿಸಲು ಸಹಾಯಕವಾಗುತ್ತದೆ. ಕರ್ನಾಟಕದ ಸ್ಥಳನಾಮ ಅಧ್ಯಯನದ ಇತಿಹಾಸದಲ್ಲಿ ಡಾ.ರಘುಪತಿ ಭಟ್ ಕೆಮ್ತೂರು ಅವರದ್ದು ಪ್ರಮುಖ ಹೆಸರು. ಸ್ಥಳನಾಮ ಅಧ್ಯಯನಕ್ಕೆ ವೈಜ್ಞಾನಿಕ ತಳಹದಿಯನ್ನು ಹಾಕಿಕೊಟ್ಟವರಲ್ಲಿ ಮೊದಲಿಗರು. ಅವರ ಸ್ಥಳನಾಮ ವರ್ಗೀಕರಣವು ತುಂಬಾ ವ್ಯಾಪಕವೂ, ವಿಸ್ತೃತವೂ ಆಗಿದ್ದು, ಕರ್ನಾಟಕದ ಇತರ ಪ್ರದೇಶಗಳ ಸ್ಥಳನಾಮ ಅಧ್ಯಯನಕ್ಕೆ ದಿಕ್ಸೂಚಿಯಾಗಿದೆ. ಆಯಾಯ ಪ್ರದೇಶಗಳಿಗೆ ಅನುಗುಣವಾಗಿ ಬದಲಿಸಿಕೊಳ್ಳುವ ಸಾಧ್ಯಗುಣ ಇರುವುದರಿಂದಲೇ ಹೆಚ್ಚಿನ ವಿದ್ವಾಂಸರು ಈ ವಿಧಾನವನ್ನೇ ಒಪ್ಪಿಕೊಂಡಿದ್ದಾರೆ.

ಇದುವರೆವಿಗೂ ಪಾಶ್ಚಾತ್ಯ ಮತ್ತು ಪೌರ್ವಾತ್ಯ ವಿದ್ವಾಂಸರು ಮಾಡಿದ ವಿವಿಧ ವರ್ಗೀಕರಣಗಳನ್ನು ಪರಿಶೀಲಿಸಲಾಯಿತು. ಅಂತಿಮವಾಗಿ

ತಿಳಿದುಬರುವುದೇನೆಂದರೆ, ಯಾವುದೇ ಒಂದು ವಿಧಾನವನ್ನು ಸಾರ್ವತ್ರಿಕ ಎಂದು ಹೇಳಲು ಬರುವುದಿಲ್ಲ. ಪ್ರತಿಯೊಂದು ಪ್ರದೇಶವೂ ತನ್ನದೇ ಆದ ಭೌಗೋಳಿಕ, ಸಾಂಸ್ಕೃತಿಕ ವೈಶಿಷ್ಟ್ಯಗಳಿಂದ ಕೂಡಿರುತ್ತದೆ. ಆಯಾಯ ಪ್ರದೇಶದ ಸಾಂಸ್ಕೃತಿಕ ಮತ್ತು ಭೌಗೋಳಿಕ ಹಿನ್ನೆಲೆಗಳಿಗೆ ಅನುಗುಣವಾಗಿ ವರ್ಗೀಕರಿಸಿಕೊಳ್ಳುವುದು ಅನಿವಾರ್ಯವೂ ಹೌದು, ಅಗತ್ಯವೂ ಹೌದು. ಈ ದಿಸೆಯಲ್ಲಿ ವಿವಿಧ ವಿದ್ವಾಂಸರ ವರ್ಗೀಕರಣಗಳು ದಿಕ್ಸೂಚಿಯಾಗಿವೆ.

ಹೊಸದುರ್ಗ ತಾಲೂಕಿನಲ್ಲಿ ಕಂದಾಯ ಗ್ರಾಮ ಮತ್ತು ಉಪಗ್ರಾಮಗಳೂ ಸೇರಿದಂತೆ ಒಟ್ಟು ನಾಲ್ಕುನೂರ ಹದಿಮೂರು ಸ್ಥಳನಾಮಗಳಿವೆ. ಇದರಲ್ಲಿ ಇಪ್ಪತ್ತೊಂಬತ್ತು ನಿರ್ವಸತಿ ಸ್ಥಳನಾಮಗಳು ಸೇರಿವೆ. ಐತಿಹಾಸಿಕ, ಪೌರಾಣಿಕ ಮತ್ತು ಸಾಂಸ್ಕೃತಿಕವಾಗಿ ಮಹತ್ವ ಹೊಂದಿರುವ ಸ್ಥಳನಾಮಗಳನ್ನು ಗುರುತಿಸಿರುವುದರಿಂದ ಈ ಸ್ಥಳನಾಮಗಳನ್ನು ವರ್ಗೀಕರಿಸುವುದು ಕಷ್ಟವಾಗಲಾರದು. ಡಾ.ರಘುಪತಿ ಭಟ್ ಕೆಮ್ಮೂರ್ ಮತ್ತು ಡಾ.ಸಿ.ಎಂ.ವಿಶ್ವನಾಥಯ್ಯ ಅವರು ತಮ್ಮ ಸ್ಥಳನಾಮ ಅಧ್ಯಯನ ಸಂದರ್ಭದಲ್ಲಿ ಮಾಡಿಕೊಂಡಿರುವ ವರ್ಗೀಕರಣವನ್ನು ಆಧರಿಸಿ ಹೊಸದುರ್ಗ ತಾಲೂಕಿನ ಸ್ಥಳನಾಮಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

| ಹೊಸದುರ್ಗ ತಾಲೂಕಿನ ಸ್ಥಳನಾಮಗಳು | | | |
|---|---|---|---|
| ಅ) ಪ್ರಾಕೃತಿಕ ಸ್ಥಳನಾಮಗಳು | | ಆ) ಸಾಂಸ್ಕೃತಿಕ ಸ್ಥಳನಾಮಗಳು | |
| 1 | ಜಲಸೂಚಕ | 15 | ಜಾತಿ ಸೂಚಕ |
| 2 | ಜಲಸಂಬಂಧಿ ಸೂಚಕ | 16 | ವ್ಯಕ್ತಿ ಸೂಚಕ |
| 3 | ಶಿಲಾ ಸೂಚಕ | 17 | ಭಕ್ತ/ದೈವ ಸೂಚಕ |
| 4 | ಸಸ್ಯ ಸೂಚಕ | 18 | ಪೂಜಾಪರಿಕರ ಸೂಚಕ |
| 5 | ಉನ್ನತ ಭೂಸೂಚಕ | 19 | ವೃತ್ತಿ ಸೂಚಕ |
| 6 | ಮೈದಾನಪ್ರದೇಶ ಸೂಚಕ | 20 | ವಲಸೆ ಸೂಚಕ |
| 7 | ಪ್ರಾಣಿ, ಕೀಟ ಸೂಚಕ | 21 | ವ್ಯಾಪಾರ ಸೂಚಕ |
| 8 | ಅರಣ್ಯ, ಹುಲ್ಲುಗಾವಲು ಸೂಚಕ | 22 | ಆಡಳಿತ ಸೂಚಕ |
| 9 | ಬೆಳೆ ಸೂಚಕ | 23 | ಕರಾರು/ಉಂಬಳಿ ಸೂಚಕ |
| 10 | ದಿಕ್ಕುದೆಸೆ ಸೂಚಕ | | |
| 11 | ಸಾಪೇಕ್ಷ ಸೂಚಕ | | |
| 12 | ಭೌತವಸ್ತು ಸೂಚಕ | | |
| 13 | ಮಣ್ಣು ಸೂಚಕ | | |
| 14 | ವರ್ಣ ಸೂಚಕ | | |

**ಅ) ಪ್ರಾಕೃತಿಕ ಸ್ಥಳನಾಮಗಳು**

1. ಜಲಸೂಚಕ ಸ್ಥಳನಾಮಗಳು: ಅಜ್ಜಿಕಂಸಾಗರ, ಕಬ್ಬಳ, ಕೆರೆಹೊಸಹಳ್ಳಿ, ಕೆಲ್ಲೋಡು, ಮತ್ತೂರು, ಮೆಟ್ಟಿನಹೊಳೆ, ಕ್ಯಾದಿಗೆರೆ, ಗಂಜಿಗೆರೆ, ತುಂಬಿನಕೆರೆ, ಮಾಡದಕೆರೆ, ಹೆಗ್ಗೆರೆ
2. ಜಲಸಂಬಂಧಿ ಸೂಚಕ ಸ್ಥಳನಾಮಗಳು: ಕೋಡಿಹಳ್ಳಿ, ಕೆರೆಕೋಡಿಹಳ್ಳಿ, ಮಾದಿಹಳ್ಳಿ, ಕೆರೆಹೊಸಹಳ್ಳಿ
3. ಶಿಲಾಸೂಚಕ ಸ್ಥಳನಾಮಗಳು: ಅರೇನಹಳ್ಳಿ, ಅರೇಹಳ್ಳಿ, ಕಗ್ಗಲಕಟ್ಟೆ, ಕಲ್ಕೆರೆ, ತಣಿಗೇಕಲ್ಲು, ನವಿಲುಕಲ್ಲು ವಡ್ಡರಹಟ್ಟಿ, ನಿರುಗಲ್ಲು, ಕರೇಕಲ್ ಹಟ್ಟಿ
4. 4.ಸಸ್ಯಸೂಚಕ ಸ್ಥಳನಾಮಗಳು: ಅತ್ತಿಗಟ್ಟ, ಅತ್ತಿಮಗೆ, ಅರಲಹಳ್ಳಿ, ಅರಳೀಹಳ್ಳಿ, ಆಲಘಟ್ಟ, ಆಲದಹಳ್ಳಿ, ಕಳ್ಳಿಹೊಸಹಳ್ಳಿ, ಕಾರೇಹಳ್ಳಿ, ಗರಗ, ತಂಡಗ, ತಾರೀಕೆರೆ, ಬೆಲಗೂರು, ಬೇವಿನಹಳ್ಳಿ, ಮಾವಿನಕಟ್ಟೆ, ಲಕ್ಕೀಹಳ್ಳಿ, ಸೊಡರನಾಳು, ಹಾಗಲಕೆರೆ, ಸೊಪ್ಪಿನಗುಡ್ಡು, ರಂಗಿಹಳ್ಳಿ, ಹುಣಸೇಕಟ್ಟೆ
5. ಉನ್ನತ ಭೂಸೂಚಕ ಸ್ಥಳನಾಮಗಳು: ಆದ್ರಿಕಟ್ಟೆ, ಉಳುವನಗೊಂದಿ, ಕುಂದೂರು, ಗುಡ್ಡದನೇರಲಕೆರೆ, ನೀರುಗುಂದ, ಮಾರಬಘಟ್ಟ, ದೊಡ್ಡಗಟ್ಟ, ಎರಡುಗುಡ್ಡದ ಸಂದಿಕಾವಲು
6. ಮೈದಾನಪ್ರದೇಶ ಸೂಚಕ ಸ್ಥಳನಾಮಗಳು: ಬೈಲಹಳ್ಳಿ
7. ಪ್ರಾಣಿ/ಕೀಟ ಸೂಚಕ ಸ್ಥಳನಾಮಗಳು: ಆನಿವಾಳ, ಕಡವಗೆರೆ, ಕಡವನಕಟ್ಟೆ, ಕರಡೀಕಟ್ಟೆ, ಗೂಳಿಹಟ್ಟಿ, ಜಾನಕಲ್ಲು, ತೋಣಚೇನಹಳ್ಳಿ
8. ಅರಣ್ಯ/ಹುಲ್ಲುಗಾವಲು ಸೂಚಕ ಸ್ಥಳನಾಮಗಳು: ಕಾನುಬೇನಹಳ್ಳಿ, ಕ್ಯಾದಿಗೆರೆಕಾವಲು, ಕುದುರೆಕಣಿವೆ, ಚಿಕ್ಕಹುಲ್ಲೇನಹಳ್ಳಿ, ನೀರುಗುಂದ ಕಾವಲು, ಬಲ್ಲಾಳಸಮುದ್ರ ಕಾವಲು, ಬಲ್ಲಾಳಸಮುದ್ರ ಕೆರೆಕಾವಲು, ಮಾರಿಕಣಿವೆ ಕಾವಲು, ವೀರಾಪುರ ಕಾವಲು, ಹುಲ್ಲುಕಟ್ಟೆ, ಅಂಚಿಬಾರಿಹಟ್ಟಿ
9. ಬೆಳೆಸೂಚಕ ಸ್ಥಳನಾಮಗಳು: ಕಡ್ಲೆಕಂಸಾಗರ, ಕಬ್ಬಿನಕೆರೆ, ಕರಲಮಾವಿನಹಳ್ಳಿ, ಬಾಳೇನಹಳ್ಳಿ, ಮೆಣಸಿನಡು, ಹುರುಳಿಹಳ್ಳಿ
10. ದಿಕ್ಕುದೆಸೆ ಸೂಚಕ ಸ್ಥಳನಾಮಗಳು: ಕೆರೆಮುಂದಲ ಲಂಬಾಣಿಹಟ್ಟಿ, ನಡುವಲ ಲಂಬಾಣಿಹಟ್ಟಿ, ಮೇಗಳಹಟ್ಟಿ ಲಂಬಾಣಿಹಟ್ಟಿ
11. ಸಾಪೇಕ್ಷ ಸೂಚಕ ಸ್ಥಳನಾಮಗಳು: ಚಿಕ್ಕಬ್ಯಾಲದಕೆರೆ, ಚಿಕ್ಕಯಗಟಿ, ಜೋಡಿಮಲ್ಲೇನಹಳ್ಳಿ, ಜೋಡಿಮಂಟೇನಹಳ್ಳಿ,

ದೊಡ್ಡಕಿಟ್ಟದಹಳ್ಳಿ, ದೊಡ್ಡಬ್ಯಾಲದಕೆರೆ, ದೊಡ್ಡತಿಮ್ಮಯ್ಯನಹಟ್ಟಿ, ದೊಡ್ಡರಂಗಯ್ಯನಹಟ್ಟಿ, ಸಣ್ಣಕಿಟ್ಟದಹಳ್ಳಿ, ಸಣ್ಣತಪ್ಪೇನಹಳ್ಳಿ, ಹಳೇವೂರ, ಹಳೇತಿಮ್ಮಯ್ಯನಹಟ್ಟಿ, ಹೆಬ್ಬಳ್ಳಿ, ಹೇರೂರು, ಹೊಸಕಡಿವಾಣಕಟ್ಟೆ, ಹೊಸಕುಂದೂರು, ಹೊಸತಿಮ್ಮಯ್ಯನಹಟ್ಟಿ

12. ಭೌತವಸ್ತು ಸೂಚಕ ಸ್ಥಳನಾಮಗಳು: ಗಾಳಿರಂಗಯ್ಯನಹಟ್ಟಿ, ಮುಗಿಲೋಡು
13. ಮಣ್ಣು ಸೂಚಕ ಸ್ಥಳನಾಮಗಳು: ಗರೀಂಬೀಳು, ಮಳಲಿ
14. ವರ್ಣಸೂಚಕ ಸ್ಥಳನಾಮಗಳು: ಕೆಂಕೆರೆ

ಆ) ಸಾಂಸ್ಕೃತಿಕ ಸ್ಥಳನಾಮಗಳು

15. ಜಾತಿ ಸೂಚಕ ಸ್ಥಳನಾಮಗಳು: ಅಗಸರಹಳ್ಳಿ, ಅಗ್ರಹಾರ, ಒಬಳಾಪುರತಾಂಡ, ಕುರುಬರಹಳ್ಳಿ, ಕೊರಚರಹಟ್ಟಿ, ಗೊಲ್ಲರಹಟ್ಟಿ, ಗೊಲ್ಲರಹಳ್ಳಿ, ತಿಗಳರಹಟ್ಟಿ, ದಾಸರಹಳ್ಳಿ, ನಾಯಕರಹಟ್ಟಿ, ಬ್ಯಾಡರಹಳ್ಳಿ, ಸಾದರಹಳ್ಳಿ, ಹಾರೋಗೊಂಡನಹಳ್ಳಿ, ಎ.ಕೆ.ಹಟ್ಟಿ, ಕನ್ನಾಗೊಂದಿ ವಡ್ಡರಹಟ್ಟಿ, ಬಂಜಾರಹಟ್ಟಿ, ಬೆನಕನಹಳ್ಳಿ, ಲಂಬಾಣಿಹಟ್ಟಿ, ಮುದ್ದಾಬೋವಿಹಟ್ಟಿ, ಯಲ್ಲಾಬೋವಿಹಟ್ಟಿ, ಸುಡುಗಾಡುಸಿದ್ದರಹಟ್ಟಿ

16. ವ್ಯಕ್ತಿಸೂಚಕ ಸ್ಥಳನಾಮಗಳು:

ಅ) ಪುರುಷ: ಅಜ್ಜಯ್ಯನಹಟ್ಟಿ, ಅಡವಿಸಂಗೇನಹಳ್ಳಿ, ಅಯ್ಯಣ್ಣನಹಳ್ಳಿ, ಅಹಮದ್ ನಗರ, ಇಂದಿರಾನಗರ, ಈರಣ್ಣನಹಟ್ಟಿ, ಐಲಾಪುರ, ಒಬಳಾಪುರ, ಕಂಠಾಪುರ, ಕಂಸಾಗರ, ಕಡದನಕೆರೆ, ಕನ್ನಾಗೊಂದಿ, ಕಣಿವೆ ಸಂಗೇನಗಳ್ಳಿ, ಕಪ್ಪನಾಯ್ಕನಹಳ್ಳಿ, ಕಲ್ಲಹಳ್ಳಿ, ಕಸಪ್ಪನಹಳ್ಳಿ, ಕಂಗುವಳ್ಳಿ, ಕೃಷ್ಣಾಪುರ, ಕಾಚಾಪುರ, ಕಾಚಾವರ, ಕಾಳನಾಯ್ಕನಹಟ್ಟಿ, ಕುಂಟಕೆಂಚಯ್ಯನಹಟ್ಟಿ, ಕೊಮರನ ಕಣಿವೆ, ಕೊಂಡಜ್ಜಿ, ಕೊಂಡಾಪುರ, ಗವಿಯಪ್ಪನಹಟ್ಟಿ, ಚನ್ನಸಮುದ್ರ, ಚನ್ನಾಪುರ, ಚಿನ್ನಾಪುರ, ತಿಪ್ಪಜ್ಜನಹಳ್ಳಿ, ತಿಮ್ಮಲಾಪುರ, ದಾಸೇನಹಳ್ಳಿ, ನಾಗನಾಯಕನಕಟ್ಟೆ, ನಾಗಯ್ಯನಹಟ್ಟಿ, ನಾಗೇನಹಳ್ಳಿ, ಬಜ್ಜಪ್ಪನಹಟ್ಟಿ, ಬಲ್ಲಾಳಸಮುದ್ರ, ಬೀಸನಹಳ್ಳಿ, ಬುಕ್ಕಸಾಗರ, ಬೈರಾಪುರ, ಬೊಮ್ಮೇನಹಳ್ಳಿ, ಬೋಚೇನಹಳ್ಳಿ, ಮಚ್ಚೇನಹಳ್ಳಿ, ಮಲ್ಲಪ್ಪನಹಳ್ಳಿ, ಮಲ್ಲಾಪುರ, ಮಲ್ಲಿಹಳ್ಳಿ, ಮುತ್ತಾಗೊಂದಿ, ಮುದ್ದಯ್ಯನಹಟ್ಟಿ, ಮೆಂಗಸಂದ್ರ, ಯಾದಗಟ್ಟ, ಯಾಲಕ್ಕಪನಹಟ್ಟಿ, ರಂಗೇನಹಳ್ಳಿ, ರಂಗಾಪುರ, ರಾಮಜ್ಜನಹಳ್ಳಿ, ರಾಮದಾಸಪುರ, ಲಕ್ಕೇನಹಳ್ಳಿ, ವೀರಾಪುರ, ಸಂಕಯ್ಯನಹಟ್ಟಿ, ಸಿದ್ದಪ್ಪನಹಟ್ಟಿ, ಸಿದ್ದಾಪುರ, ಸಿದ್ದಗೊಂಡನಹಳ್ಳಿ, ಸಿರಗೊಂಡನಹಳ್ಳಿ, ಸೀರನಕಟ್ಟೆ, ಸೋಮಸಂದ್ರ, ಹಂದನಕೆರೆ, ಹಕ್ಕಿತಿಮ್ಮಯ್ಯನಹಟ್ಟಿ, ಹನುಮನಹಟ್ಟಿ, ಹಾಳುಸಂಗಾಪುರ, ಹೊನ್ನೆಕೆರೆ, ಹೊನ್ನೇನಹಳ್ಳಿ

ಆ) ಮಹಿಳೆ: ಚಿಕ್ಕಮ್ಮನಹಳ್ಳಿ, ನಾಕಿಕೆರೆ, ನಾಗತೀಹಳ್ಳಿ, ರಂಗವ್ವನಹಳ್ಳಿ, ವೀರವ್ವನಾಗತಿಹಳ್ಳಿ

17. ಭಕ್ತ/ದೈವಸೂಚಕ ಸ್ಥಳನಾಮಗಳು:

ಅ) ದೇವರು: ಕಂಚೀಪುರ, ಗವಿರಂಗಾಪುರ, ಗವಿರಂಗಾಪುರಬೆಟ್ಟ, ದೇವಪುರ, ದೇವರಹಟ್ಟಿ, ದೇವಿಗೆರೆ, ನರಸೀಪುರ, ನಾಗರಕಟ್ಟೆ, ಬೆನಕನಹಳ್ಳಿ, ಮೈಲಾರಪುರ, ಲಿಂಗದಹಳ್ಳಿ, ವೆಂಗಳಾಪುರ, ಶಿವನೇಕಟ್ಟೆ, ಶ್ರೀರಂಗಪುರ, ಶ್ರೀರಾಮಪುರ, ಸೋಮೇನಹಳ್ಳಿ, ಹನುಮನಹಳ್ಳಿ, ಹರೇನಹಳ್ಳಿ, ಹಾಲುರಾಮೇಶ್ವರ, ಹಿಂಡೇದೇವರಹಟ್ಟಿ

ಆ) ದೇವತೆ: ಲಕ್ಕಿದೇವರಹಳ್ಳಿ, ಮಹಾಲಕ್ಕಿಪುರ,

ಇ) ಕ್ಷುದ್ರದೇವತೆ: ಅಮ್ಮನಹಟ್ಟಿ, ಮಸಣಿಹಳ್ಳಿ, ಮಾರಿಕಣಿವೆ, ಕಾಟಿಹಳ್ಳಿ, ಮಾಳಿಗೆಹಟ್ಟಿ

ಈ) ಭಕ್ತ/ಭಕ್ತೆ: ಗೊರವಿನಕಲ್ಲು, ಗೊರವಿಗೊಂಡನಹಳ್ಳಿ, ಜೋಗಮ್ಮನಹಳ್ಳಿ, ಜೋಗಿಹಳ್ಳಿ

18. ಪೂಜಾಪರಿಕರ ಸೂಚಕ ಸ್ಥಳನಾಮಗಳು: ದೊಡ್ಡಕರ್ಪೂರಕಟ್ಟೆ
19. ವೃತ್ತಿಸೂಚಕ ಸ್ಥಳನಾಮಗಳು: ಇಟ್ಟಿಗೇಹಳ್ಳಿ, ಕಂಚೀಹಳ್ಳಿ, ಕಿಟ್ಟದಹಾಳು, ಕುಂಬಾರಕಟ್ಟೆ, ಕುಂಬಾರಗುಡ್ಡು, ಪೂಜಾರಹಟ್ಟಿ, ಬಳ್ಳೇಕೆರೆ, ಬಂಡಿಹಳ್ಳಿ, ಬಾಚಾವರ, ಬಾಣಸಿಹಳ್ಳಿ, ಬೋಕಿಕೆರೆ, ಬಾನುಪುರ, ಸಾಣೆಹಳ್ಳಿ, ಕಡಿವಾಣಕಟ್ಟೆ
20. ವಲಸೆ ಸೂಚಕ ಸ್ಥಳನಾಮಗಳು: ಗೂಳಿಹಳ್ಳಿ
21. ವ್ಯಾಪಾರ ಸೂಚಕ ಸ್ಥಳನಾಮಗಳು: ದೇವಪುರನಗದಿಕಾವಲು, ಬಾಗಶೆಟ್ಟಿಹಳ್ಳಿ, ಸೆಟ್ಟಿಹಳ್ಳಿ
22. ಆಡಳಿತ ಸೂಚಕ ಸ್ಥಳನಾಮಗಳು: ಅರಸನಪಾಳ್ಯ, ಕಪ್ಪಗೆರೆ, ಕಾವಲರಮನೆ, ದಳವಾಯಿಕಟ್ಟೆ, ಪಾಳ್ಯದಹಳ್ಳಿ, ಬಂಟನಗವಿಹಟ್ಟಿ, ಬಾಗೂರು, ಹೊಸದುರ್ಗ
23. ಕರಾರು/ಉಂಬಳಿ ಸೂಚಕ ಸ್ಥಳನಾಮಗಳು: ಗುತ್ತಿಕಟ್ಟೆ, ಜಮ್ಮಾಪುರ

ಒಟ್ಟಾರೆ, ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರುಗಳ ವರ್ಗೀಕರಣಗಳನ್ನು ಆಧರಿಸಿ ಹೊಸದುರ್ಗ ತಾಲೂಕಿನ ಸ್ಥಳನಾಮಗಳನ್ನು ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಸ್ಥಳನಾಮಗಳೆಂದು ವರ್ಗೀಕರಿಸಿದೆ.ಪ್ರಾಕೃತಿಕ ಸ್ಥಳನಾಮಗಳಲ್ಲಿ ಜಲಸೂಚಕ, ಶಿಲಾಸೂಚಕ ಮುಂತಾದ ಹದಿನಾಲ್ಕು ಬಗೆಗಳನ್ನು ಹಾಗೂ ಸಾಂಸ್ಕೃತಿಕ ಸ್ಥಳನಾಮಗಳಲ್ಲಿ ಜಾತಿಸೂಚಕ, ವ್ಯಕ್ತಿಸೂಚಕ ಮುಂತಾದ ಒಂಬತ್ತು ಬಗೆಗಳನ್ನು ಗುರುತಿಸಲಾಗಿದೆ. ಸ್ಥಳನಾಮ ಘಟಕಗಳ ವರ್ಗೀಕರಣವನ್ನು ಆಧರಿಸಿ ತಾಲೂಕಿನ ಪ್ರಾಚೀನತೆಯನ್ನು ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆಯನ್ನು ಅರಿಯಲು ಸಹಾಯಕವಾಗುತ್ತದೆ. ಜೊತೆಗೆ ಸ್ಥಳನಾಮಗಳ ಮೇಲಾಗಿರುವ ವಿವಿಧ ಭಾಷೆಗಳ ಪ್ರಭಾವ ಮತ್ತು ಸ್ಥಳನಾಮಗಳ ಪರಿವರ್ತನೆಗಳನ್ನು ಕಾಲಾನುಕ್ರಮವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಸ್ಥಳನಾಮಗಳ ವಾರ್ಗಿಕಗಳ ವರ್ಗೀಕರಣವು ಸ್ಥಳನಾಮಗಳ ಭಾಷಿಕ ಅಧ್ಯಯನಕ್ಕೂ ತುಂಬಾ ನೆರವಾಗುತ್ತದೆ.

**ಕೊನೆಟಿಪ್ಪಣಿಗಳು**

1. ಡಾ.ವಿಶ್ವನಾಥ, ಸ್ಥಳನಾಮಗಳು, ಪುಟ.25
2. ದೇಜಗೌ, ಸ್ಥಳನಾಮ ವ್ಯಾಸಂಗ ಪುಟ.64-70
3. ಅದೇ ಪುಟ.74-77
4. ಪೂರ್ವೋಕ್ತ ಪುಟ.25

**ಪರಾಮರ್ಶನ ಗ್ರಂಥಗಳು**


1. ಆರ್ಕೆ.ಮಣಿಪಾಲ್ -ಹೆಸರಿನಲ್ಲೇನಿದೆ? , ನ್ಯೂಸ್ಟಾರ್ ಪಬ್ಲಿಕೇಶನ್, ಬೆಂಗಳೂರು-78, 1989
2. ಕಲಬುರ್ಗಿ ಎಂ.ಎಂ - ಮಾರ್ಗ ಸಂಪುಟ-2, ಸಪ್ನ ಬುಕ್ ಹೌಸ್ ತೃ.ಮುದ್ರಣ:2010
3. ಗೋಪಾಲಕೃಷ್ಣ ವಿ - ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ, ಕೋಲಾರ,1987
4. ಜವರೇಗೌಡ ದೇ. - ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ಮೈಸೂರು-12, 1990
5. ಬಾಗೂರು ನಾಗರಾಜಪ್ಪ -ಹೊಸದುರ್ಗ ಸುತ್ತ
6. ರಘುಪತಿಭಟ್ಟ ಕೆಮ್ತೂರ್ -ತುಳುನಾಡಿನ ಸ್ಥಳನಾಮಗಳು' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1979
7. ವಿಶ್ವನಾಥಯ್ಯ ಸಿ.ಎಂ - ಕಡೂರು ತಾಲ್ಲೂಕಿನ ಸ್ಥಳನಾಮಗಳು, ಜ್ಞಾನಭಾರತಿ ಪ್ರಕಾಶನ, ಕಡೂರು, 2006


**ನಿಘಂಟು, ಶಾಸನಸಂಪುಟ, ವಿಶ್ವಕೋಶಗಳು**


1. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು (ಎಂಟು ಸಂಪುಟಗಳು)
   ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 2010 ಎರಡನೆಯ ಮುದ್ರಣ, (1970)
2. ಎಫ್.ಕಿಟ್ಟೆಲ್
   ಕನ್ನಡ-ಇಂಗ್ಲಿಶ್ ನಿಘಂಟು, ಮಂಗಳೂರು ಬಾಸೆಲ್ ಮಿಶನ್,1894, 2008 (15ನೇ ಮುದ್ರಣ)
3. ಎಪಿಗ್ರಾಫಿಯ ಕರ್ನಾಟಕ
   ಬಿ.ಎಲ್.ರೈಸ್, (ಸಂಪುಟ.11 ಚಿತ್ರದುರ್ಗ ಜಿಲ್ಲೆ), ಸರಕಾರಿ ಮುದ್ರಣಾಲಯ, ಬೆಂಗಳೂರು, 1901
4. ಕನ್ನಡ ವಿಶ್ವಕೋಶ
   ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,1973